ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನ ಸಭೆ
ಹತ್ತನೇ ಅಧಿವೇಶನ

# ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-25)**

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು ಮತ್ತು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1991ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 27) ಮತ್ತು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1991ನ್ನು (1991ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 10ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (1966ರ ಕರ್ನಾಟಕ ಅಧಿನಿಯಮ 27) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 10ನೇ ಪ್ರಕರಣದ (1)ನೇ ಉಪಪ್ರಕರಣದ (i) ನೇ ಖಂಡದಲ್ಲಿ "ಹನ್ನೊಂದು ಜನ ಕೃಷಿಕರು, ಆ ಪೈಕಿ ಒಬ್ಬ ಮಹಿಳೆ ಇರತಕ್ಕದ್ದು" ಎಂಬ ಪದಗಳಿಗೆ "ಹದಿನಾಲ್ಕು ಜನ ಕೃಷಿಕರು, ಆ ಪೈಕಿ ಮೂವರು ಮಹಿಳೆಯರು ಇರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. 11ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 11ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ,-

(i) (i) ನೇ ಖಂಡದಲ್ಲಿ, "ಒಬ್ಬರು ಮಹಿಳೆಯಾಗಿರತಕ್ಕದ್ದು" ಎಂಬ ಪದಗಳಿಗೆ "ಇಬ್ಬರು ಮಹಿಳೆಯರಾಗಿರತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ix) ನೇ ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ix) ಮಾರುಕಟ್ಟೆ ಸಮಿತಿಯ ಎಲ್ಲಾ ಸಭೆಗಳಲ್ಲಿ ಭಾಗವಹಿಸಲು ಮತ್ತು ಮತ ಚಲಾಯಿಸಲು ಹಕ್ಕನ್ನು ಹೊಂದಿರುವ, ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದ ಕೃಷಿಕ ವರ್ಗಕ್ಕೆ ಸೇರಿರುವ ಮೂವರು ಸದಸ್ಯರು, ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು ಮತ್ತು ಅವರು ರಾಜ್ಯ ಸರ್ಕಾರದ ಇಚ್ಛಾನುಸಾರ ಪದಧಾರಣ ಮಾಡತಕ್ಕದ್ದು."

**4. 14ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 14ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ "ಒಂದು ಚುನಾವಣಾ ಕ್ಷೇತ್ರವನ್ನು ಮಹಿಳೆಯರಿಗಾಗಿ" ಎಂಬ ಪದಗಳಿಗೆ "ಎರಡು ಚುನಾವಣಾ ಕ್ಷೇತ್ರಗಳನ್ನು ಮಹಿಳೆಯರಿಗಾಗಿ" ಎಂಬ ಪದಗಳನ್ನು ಪ್ರತಿಯೋಜಿಸಕ್ಕದ್ದು.

**5. 90ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 90ನೇ ಪ್ರಕರಣದ (3)ನೇ ಉಪಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಮಾರುಕಟ್ಟೆ ನಿಧಿಗೆ ಜಮೆಯಾದ ಮೊಬಲಗನ್ನು ಮತ್ತು ಮಾರುಕಟ್ಟೆ ಸಮಿತಿಯು ಸ್ವೀಕರಿಸಿದ ಎಲ್ಲಾ ಇತರ ಹಣವನ್ನು,-

(ಎ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ; ಅಥವಾ

(ಬಿ) ಸಹಕಾರ ಸಂಘಗಳ ರಿಜಿಸ್ಟ್ರಾರರು ಅನುಮೋದಿಸಿದ ಸಹಕಾರಿ ಜಿಲ್ಲಾ ಕೇಂದ್ರ ಬ್ಯಾಂಕಿನಲ್ಲಿ; ಅಥವಾ

(ಸಿ) ಸರ್ಕಾರಿ ಉಳಿತಾಯಗಳ ಬ್ಯಾಂಕ್‌ನಲ್ಲಿ; ಅಥವಾ

(ಡಿ) ಕೃಷಿ ಮಾರುಕಟ್ಟೆ ನಿರ್ದೇಶಕರ ಪೂರ್ವಾನುಮೋದನೆಯೊಂದಿಗೆ ಅನುಸೂಚಿತ ಬ್ಯಾಂಕ್‌ನಲ್ಲಿ; ಅಥವಾ

(ಇ) ಕೃಷಿ ಮಾರುಕಟ್ಟೆ ನಿರ್ದೇಶಕರ ಪೂರ್ವಾನುಮೋದನೆಯೊಂದಿಗೆ ಯಾವುದೇ ಕೇಂದ್ರ ಅಥವಾ ರಾಜ್ಯ ಸರ್ಕಾರದ ಭದ್ರತೆಗಳಲ್ಲಿ,

- ಇಡತಕ್ಕದ್ದು ಅಥವಾ ಹೂಡತಕ್ಕದ್ದು."

**6. 1991ರ ಕರ್ನಾಟಕ ಅಧಿನಿಯಮ 16ರ ತಿದ್ದುಪಡಿ.-** ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1991ರ (1991ರ ಕರ್ನಾಟಕ ಅಧಿನಿಯಮ 16) 41ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 27) ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ, ಎಂದರೆ:-

(1) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಸಮಿತಿಯಲ್ಲಿ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಮಹಿಳಾ ಪ್ರಾತಿನಿಧ್ಯವನ್ನು "ಒಂದರಿಂದ" "ಮೂರಕ್ಕೆ" ಹೆಚ್ಚಿಸುವುದು ಮತ್ತು ಆ ಮೂಲಕ 2016-2017ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾಡಲಾದ ಪ್ರಸ್ತಾವಗಳನ್ನು ಜಾರಿಗೊಳಿಸುವುದು;

(2) ಆದ್ಯತೆಯ ಮೇರೆಗೆ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಲ್ಲಿ ಅಥವಾ ಸಹಕಾರಿ ಜಿಲ್ಲಾ ಕೇಂದ್ರ ಬ್ಯಾಂಕ್‌ನಲ್ಲಿ ಮಾರುಕಟ್ಟೆ ನಿಧಿಯನ್ನು ಹೂಡಿಕೆ ಮಾಡುವುದಕ್ಕಾಗಿ, ಏಕೆಂದರೆ ಈ ಬ್ಯಾಂಕುಗಳು ಇದಕ್ಕೆ ಪ್ರತಿಯಾಗಿ ರೈತರಿಗೆ ಸಾಲಗಳನ್ನು ನೀಡುತ್ತಿದ್ದು ಮತ್ತು ಮೇಲಿನ ಬ್ಯಾಂಕುಗಳಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಹೂಡಿಕೆ ಮಾಡಿದಲ್ಲಿ ಲಭ್ಯವಿರುವ ಹೆಚ್ಚುವರಿ ಉಳಿತಾಯವು ರೈತರ ಬೆಂಬಲಕ್ಕೆ ಸಹಕಾರಿಯಾಗುವುದು;

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1991 (1991ರ ಕರ್ನಾಟಕ ಅಧಿನಿಯಮ 16) 41ನೇ ಪ್ರಕರಣವನ್ನು, ಸದರಿ ಉಪಬಂಧವನ್ನು ಜಾರಿಗೊಳಿಸದೇ ಇರುವುದರಿಂದ ಹಾಗೂ ಈಗ ಅಂಥದೇ ಉಪಬಂಧವನ್ನು ಪ್ರತಿಯೋಜಿಸಲು ಪ್ರಸ್ತಾವಿಸಿರುವುದರಿಂದ, ಬಿಟ್ಟು ಬಿಡಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಸ್.ಎಸ್. ಮಲ್ಲಿಕಾರ್ಜುನ**
ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ
ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

## ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 27) ಉದ್ಧೃತ ಭಾಗ

**xxx** **xxx** **xxx**

**10. ಮೊದಲನೇ ಮಾರುಕಟ್ಟೆ ಸಮಿತಿಯ ರಚನೆ.-** (1) 11ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಪ್ರಾರಂಭದ ತರುವಾಯ 4ನೇ ಪ್ರಕರಣದ ಮೇರೆಗೆ ಘೋಷಿಸಲಾದ ಮಾರುಕಟ್ಟೆ ಪ್ರದೇಶಕ್ಕಾಗಿ ರಚಿಸಲಾಗುವ ಮೊದಲನೇ ಮಾರುಕಟ್ಟೆ ಸಮಿತಿಯು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಾಮ ನಿರ್ದೇಶಿಸುವ ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು,

**(i)** 16ನೇ ಪ್ರಕರಣದ (1)ನೇ ಖಂಡದ (ಎ) ಉಪಖಂಡದ ಅಥವಾ (2)ನೇ ಖಂಡದ ಮೇರೆಗೆ ಅನರ್ಹಗೊಳಿಸಿಲ್ಲದ ಮತ್ತು ಮಾರುಕಟ್ಟೆ ಪ್ರದೇಶದಲ್ಲಿ ವಾಸಿಸುವ ಹನ್ನೊಂದು ಜನ ಕೃಷಿಕರು, ಆ ಪೈಕಿ ಒಬ್ಬ ಮಹಿಳೆ ಇರತಕ್ಕದ್ದು. ಅನುಸೂಚಿತ ಜಾತಿಗೆ ಸೇರಿದ ಒಬ್ಬ ವ್ಯಕ್ತಿ, ಅನುಸೂಚಿತ ಪಂಗಡಕ್ಕೆ ಸೇರಿದ ಒಬ್ಬ ವ್ಯಕ್ತಿ, 'ಎ' ಪ್ರವರ್ಗದ ಅಡಿಯಲ್ಲಿ ಬರುವ ಒಬ್ಬ ವ್ಯಕ್ತಿ ಮತ್ತು 'ಬಿ' ಪ್ರವರ್ಗದ ಅಡಿಯಲ್ಲಿ ಬರುವ ಒಬ್ಬ ವ್ಯಕ್ತಿಯಾಗಿರತಕ್ಕದ್ದು;

**xxx** **xxx** **xxx**

**11. ಎರಡನೇ ಮತ್ತು ತರುವಾಯದ ಮಾರುಕಟ್ಟೆ ಸಮಿತಿಯ ರಚನೆ.-** (1) 10ನೇ ಪ್ರಕರಣದಲ್ಲಿ ಉಪಬಂಧಿಸಿರುವುದನ್ನು ಉಳಿದು, ಪ್ರತಿಯೊಂದು ಮಾರುಕಟ್ಟೆ ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

**(i)** ಮಾರುಕಟ್ಟೆ ಪ್ರದೇಶದಲ್ಲಿನ ಕೃಷಿಕರು ಚುನಾಯಿಸಿದ ಹನ್ನೊಂದು ಜನ ಸದಸ್ಯರು, ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು, ಒಬ್ಬರು ಅನುಸೂಚಿತ ಜಾತಿಗಳಿಗೆ ಸೇರಿದವರಾಗಿರತಕ್ಕದ್ದು, ಒಬ್ಬರು ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿರತಕ್ಕದ್ದು ಮತ್ತು ಇಬ್ಬರು ವ್ಯಕ್ತಿಗಳು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು. ಅದರಲ್ಲಿ ಒಬ್ಬರು 'ಎ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಯಾಗಿರತಕ್ಕದ್ದು ಮತ್ತು ಒಬ್ಬರು 'ಬಿ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಯಾಗಿರತಕ್ಕದ್ದು:

ಪರಂತು, ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಯು ಲಭ್ಯವಿಲ್ಲದಿದ್ದಲ್ಲಿ, ಆ ಪ್ರವರ್ಗಕ್ಕಾಗಿ ಮೀಸಲಿರಿಸಿದ ಸ್ಥಾನವನ್ನು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಯಿಂದಲೂ ಸಹ ತುಂಬತಕ್ಕದ್ದು ಮತ್ತು

ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಯೂ ಲಭ್ಯವಿಲ್ಲದಿದ್ದಲ್ಲಿ ಆ ಪ್ರವರ್ಗಕ್ಕಾಗಿ ಮೀಸಲಿರಿಸಿದ ಸ್ಥಾನವನ್ನು ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಯಿಂದ ತುಂಬತಕ್ಕದ್ದು:

**xxx xxx xxx**

(ix) ಮಾರುಕಟ್ಟೆ ಸಮಿತಿಯ ಎಲ್ಲಾ ಸಭೆಗಳಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರುವ, ರಾಜ್ಯ ಸರ್ಕಾರದಿಂದ ನಾಮ ನಿರ್ದೇಶಿತರಾದ ಮೂವರು ಸದಸ್ಯರು ಮತ್ತು ಅವರು ರಾಜ್ಯ ಸರ್ಕಾರದ ಇಚ್ಛಾನುಸಾರ ಪದಧಾರಣ ಮಾಡತಕ್ಕದ್ದು:

**xxx xxx xxx**

**14. ಕೆಲವು ಸದಸ್ಯರ ಚುನಾವಣೆಯ ಚುನಾವಣಾ ಕ್ಷೇತ್ರಗಳು.-**

(2) (1)ನೇ ಉಪಪ್ರಕರಣದ (i)ನೇ ಖಂಡದ ಉದ್ದೇಶಕ್ಕಾಗಿ, ಡೆಪ್ಯುಟಿ ಕಮೀಷನರನು, ಅಧಿಸೂಚನೆಯ ಮೂಲಕ ಹನ್ನೊಂದು ಕೃಷಿಕರ ಚುನಾವಣಾ ಕ್ಷೇತ್ರಗಳ ಪ್ರಾದೇಶಿಕ ವ್ಯಾಪ್ತಿಯನ್ನು ನಿರ್ಧರಿಸತಕ್ಕದ್ದು ಮತ್ತು ಆ ಪೈಕಿ ಒಂದು ಚುನಾವಣಾ ಕ್ಷೇತ್ರವನ್ನು ಮಹಿಳೆಯರಿಗಾಗಿ ಒಂದನ್ನು ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ, ಒಂದನ್ನು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ, ಒಂದನ್ನು 'ಎ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮತ್ತು ಒಂದನ್ನು 'ಬಿ' ಪ್ರವರ್ಗದ ಅಡಿಯಲ್ಲಿ ಬರುವ ವ್ಯಕ್ತಿಗಳಿಗೆ ಮೀಸಲಿಡತಕ್ಕದ್ದು.

**xxx xxx xxx**

**90. ಮಾರುಕಟ್ಟೆ ನಿಧಿ, ಅದರ ಅಭಿರಕ್ಷೆ ಮತ್ತು ಹೂಡಿಕೆ.- xxx xxx xxx**

(3) ಈ ಅಧಿನಿಯಮದಲ್ಲಿ ಉಪಬಂಧಿಸಿರುವುದನ್ನು ಉಳಿದು, ಮಾರುಕಟ್ಟೆ ನಿಧಿಗೆ ಜಮೆಯಾದ ಮೊಬಲಗನ್ನು ಮತ್ತು ಮಾರುಕಟ್ಟೆ ಸಮಿತಿಯು ಸ್ವೀಕರಿಸಿದ ಎಲ್ಲಾ ಇತರ ಹಣವನ್ನು,-

(ಎ) ಸಹಕಾರಿ ಸಂಘಗಳ ರಿಜಿಸ್ಟ್ರಾರರು ಅನುಮೋದಿಸಿದ ಸಹಕಾರಿ ಜಿಲ್ಲಾ ಕೇಂದ್ರ ಬ್ಯಾಂಕ್‌ನಲ್ಲಿ; ಅಥವಾ

(ಬಿ) ಸರ್ಕಾರಿ ಉಳಿತಾಯ ಬ್ಯಾಂಕ್‌ನಲ್ಲಿ; ಅಥವಾ

(ಸಿ) ಕೃಷಿ ಮಾರುಕಟ್ಟೆ ನಿರ್ದೇಶಕನ ಪೂರ್ವಾನುಮೋದನೆಯೊಂದಿಗೆ ಅನುಸೂಚಿತ ಬ್ಯಾಂಕ್‌ನಲ್ಲಿ; ಅಥವಾ

(ಡಿ) ಕೃಷಿಮಾರುಕಟ್ಟೆ ನಿರ್ದೇಶಕನ ಪೂರ್ವಾನುಮೋದನೆಯೊಂದಿಗೆ ಯಾವುದೇ ಕೇಂದ್ರ ಅಥವಾ ರಾಜ್ಯ ಸರ್ಕಾರದ ಭದ್ರತೆಗಳಲ್ಲಿ

- ಇಡತಕ್ಕದ್ದು ಅಥವಾ ಹೂಡತಕ್ಕದ್ದು.

**xxx** **xxx** **xxx**

**ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಮತ್ತು ಕೆಲವು ಇತರ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1991ರ (1991ರ ಕರ್ನಾಟಕ ಅಧಿನಿಯಮ ಸಂಖ್ಯೆ 16) ಉದ್ಧೃತ ಭಾಗ**

**41. 90ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 90ನೇ ಪ್ರಕರಣದ, (3)ನೇ ಉಪಪ್ರಕರಣದಲ್ಲಿ (ಎ) ಯಿಂದ (ಡಿ) ವರೆಗಿನ ಖಂಡಗಳಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಲ್ಲಿ; ಅಥವಾ

(ಬಿ) ಮಾರುಕಟ್ಟೆ ಪ್ರದೇಶದಲ್ಲಿ ತನ್ನ ಶಾಖೆಯನ್ನು ಹೊಂದಿರುವ ಯಾವುದೇ ಸರ್ಕಾರಿ ಉಳಿತಾಯ ಬ್ಯಾಂಕ್‌ನಲ್ಲಿ; ಅಥವಾ

(ಸಿ) ಸರ್ಕಾರದ ಉಳಿತಾಯಗಳ ಬ್ಯಾಂಕ್‌ನಲ್ಲಿ."

**xxx** **xxx** **xxx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಪಿ7, ಕಾಸೂ . 1000-ಪ್ರತಿಗಳು 14ನೇ ಜುಲೈ, 2016

KARNATAKA LEGISLATIVE ASSEMBLY

FOURTEENTH LEGISLATIVE ASSEMBLY

TENTH SESSION

# THE KARNATAKA AGRICULTURAL PRODUCE MARKETING (REGULATION AND DEVELOPMENT) AND CERTAIN OTHER LAW (AMENDMENT) BILL, 2016

**(L.A. Bill No. 25 of 2016)**

A Bill further to amend the Karnataka Agricultural Produce Marketing (Regulation and Development) Act, 1966 and the Karnataka Agricultural Produce Marketing (Regulation) and Certain Other Laws (Amendment) Act, 1991.

Whereas, it is expedient further to amend the Karnataka Agricultural Produce Marketing (Regulation and Development) Act, 1966 (Karnataka Act 27 of 1966) and the Karnataka Agricultural Produce Marketing (Regulation) and Certain Other Laws (Amendment) Act, 1991) (Karnataka Act 16 of 1991) for the purposes hereinafter appearing;

Be it enacted by the Karnataka State Legislature in the sixty-seventh year of the Republic of India, as follows:-

**1. Short title and commencement.-** (1) This Act may be called the Karnataka Agricultural Produce Marketing (Regulation and Development) and Certain other law (Amendment) Act, 2016.

(2) It shall come into force at once.

**2. Amendment of section 10.-** In section 10 of the Karnataka Agricultural Produce Marketing (Regulation and Development) Act, 1966 (Karnataka Act 27 of 1966), (hereinafter referred to as the principal Act) in sub-section (1), in clause (i), for the words, "eleven agriculturists of whom one shall be a woman" the words, "fourteen agriculturists of whom three shall be women" shall be substituted.

**3. Amendment of section 11.-** In section 11 of the principal Act, in sub-section (1),-

(i) in clause (i), for the words "one shall be a woman" the words "two shall be women" shall be substituted.

(ii) for clause (ix), the following shall be substituted, namely:-

"(ix) three members shall be persons belonging to agriculturists and among them, one shall be a woman to be nominated by the State Government, who shall have right to participate and vote in all the meetings of the Market Committee and shall hold office at the pleasure of the State Government."

**4. Amendment of section 14.-** In section 14 of the principal Act, in sub-section (2), for the words "one for woman" the words "two for women" shall be substituted.

**5. Amendment of section 90.-** In section 90 of the principal Act, for sub-section (3), the following shall be substituted, namely:-

"(3) Save as otherwise provided in this Act, the amount to the credit of the market fund and all other moneys received by the market committee shall be kept or invested,-

(a) in the Karnataka State Co-operative Apex Bank; or
(b) in a Co-operative District Central Bank approved by the Registrar of Co-operative societies; or
(c) in a Government savings bank; or
(d) in a scheduled bank with the previous approval of the Director of Agricultural Marketing; or
(e) in any of the Central or State Government securities with the previous approval of the Director of Agricultural Marketing."

**6. Amendment of Karnataka Act 16 of 1991.-** In the Karnataka Agricultural Produce Marketing (Regulation) and certain other Laws (Amendment) Act, 1991 (Karnataka Act 16 of 1991) section 41 shall be omitted.

## STATEMENT OF OBJECTS AND REASONS

It is considered necessary to amend the Karnataka Agricultural Produce Marketing (Regulation and Development) Act, 1966 (Karnataka Act 27 of 1966) to provide for,-

(1) increase in the representation of women in the Market Committee of APMC's from "one" to "three" to be nominated by the State Government and thereby giving effect to the proposals made in the Budget Speech of 2016-2017; and

(2) investment of marketing fund in the Karnataka State Co-operative Apex Bank or in a Co-operative District central Bank on priority basis because these banks which inturn give loans to the farmers and hence the surplus available with the Agriculture Produce Marketing Committees if invested in aforesaid Banks will help the farmers cause.

It is also proposed to amend the Karnataka Agricultural Produce Marketing (Regulation) and Certain Other Laws (Amendment) Act, 1991 (Karnataka Act 16 of 1991), to omit section 41 since the said provision has not been brought into force and similar provision is now proposed to be substituted.

Hence the Bill.

## FINANCIAL MEMORANDUM

There is no extra expenditure involved in the proposed Legislative measure.

**S.S. MALLIKARJUNA**
Minister for Horticulture and
Agricultural Marketing

**S.Murthy**
Secretary (I/C)
Karnataka Legislative Assembly

## ANNEXURE

## EXTRACT FROM THE KARNATAKA AGRICULTURAL PRODUCE MARKETING (REGULATION AND DEVELOPMENT) ACT, 1966, (Karnataka Act No. 27 of 1966)

**XX XX XX**

**10. Constitution of the first market committee.-** (1) Notwithstanding anything contained in section 11, the first market committee constituted for a market area declared after the commencement of this Act under section 4 shall consist of the following members nominated by notification by the State Government:-

(i) eleven agriculturists of whom one shall be a woman and one person belonging to the Scheduled Castes, one person belonging to the Scheduled Tribes , one person falling under category 'A' and one person falling under category 'B' residing in the market area, not disqualified under sub-clause (a) of clause (1) or clause (2) of section 16;

**XX XX XX**

**11.Constitution of second and subsequent market committees.-** (1) Save as provided in section 10, every market committee shall consist of the following members, namely:-

(i) eleven members shall be persons elected by the agriculturists in the market area of whom one shall be a woman, one shall be a person belonging to the Scheduled Castes, one shall be a person belonging to Scheduled Tribes and two persons belonging to the Backward Classes out of which one shall be from persons falling under Category 'A' and one shall be from persons falling under category 'B': Provided that if no person belonging to the Scheduled Caste is available, the seat reserved for that category shall also be filled by a person belonging to the Scheduled Tribes and vice versa: Provided further that if no persons falling under category 'A' is

available, the seat reserved for that category shall also be filled by a person falling under category 'B' and vice versa

**XX** **XX** **XX**

**14. Constituencies for election of certain members.- XX XX XX**

(2) For the purpose of clause (i) of sub-section (1), the Deputy Commissioner shall by notification determine the territorial extent of the eleven agriculturists' constituencies and shall reserve one for women, one for persons belonging to the Scheduled Castes, one for persons belonging to the Scheduled Tribes, one for persons falling under category 'A' and one for persons falling under category 'B' . The number of voters in each such constituency shall as far as practicable be the same throughout the market area.

**XX** **XX** **XX**

**90. Market Fund, its custody and investment.- XX XX XX**

(3) Save as otherwise provided in this Act, the amount to the credit of the Market Fund and all other moneys received by the market committee shall be kept or invested,-

(a) in a Co-operative District Central Bank approved by the Registrar of Co-operative Societies; or

(b) in a Government Savings Bank; or

(c) in a Scheduled bank with the previous approval of the [Director of Agricultural Marketing; or

(d) in any of the Central or State Government securities with previous approval of the Director of Agricultural Marketing.

**XX** **XX** **XX**

## EXTRACT FROM THE KARNATAKA AGRICULTURAL PRODUCE MARKETING (REGULATION) AND CERTAIN OTHER LAWS (AMENDMENT) ACT, 1991 (KARNATAKA ACT 16 OF 1991)

**41. Amendment of section 90.-** In section 90 of the Principal Act,- In sub-section (3), for clauses (a) to (d), the following shall be substituted, namely.-

"(a) in the Karnataka State Co-operative Apex Bank; or

(b) in any Co-operative Bank having its branch office in the market area; or

(c) in a Government Savings Bank."

**XX** **XX** **XX**

Government Press, Vikasa Soudha Unit, Bengaluru 14th July 2016 P7, W.D., Copies 1000